ಅನುಬಂಧ

ಭಾಷಾಂತರ ನಿರ್ದೇಶನಾಲಯ

ಭಾಷಾಂತರ ನಿರ್ದೇಶನಾಲಯದ ಪ್ರಮುಖ ಕೆಲಸ ಕಾರ್ಯಗಳೆಂದರೆ :

1. 1973ರ ಕರ್ನಾಟಕ ರಾಜಭಾಷಾ ಅಧಿನಿಯಮದ 5 (ಎ) ಪ್ರಕರಣದ ಮೇರೆಗೆ ರಾಜ್ಯ ಅಧಿನಿಯಮಗಳು ಮತ್ತು ಅವುಗಳ ಮೇರೆಗೆ ರಚಿಸಿದ ನಿಯಮಗಳ ಕನ್ನಡ ಭಾಷಾಂತರ ಹಾಗೂ ಪ್ರಕಟಣೆ;

2. ಕೇಂದ್ರ ಅಧಿನಿಯಮಗಳ ಅಧಿಕೃತ ಪಾಠಗಳ (ಕೇಂದ್ರ ಕಾನೂನುಗಳು) ಅಧಿನಿಯಮ, 1973 2(ಎ) ಪ್ರಕರಣದ ಮೇರೆಗೆ ಕೇಂದ್ರ ಅಧಿನಿಯಮಗಳ ಕನ್ನಡ ಭಾಷಾಂತರ ಹಾಗೂ ಪ್ರಕಟಣೆ;

3. ರಾಜ್ಯದ ಆಡಳಿತ ಭಾಷಾ ನೀತಿಯ ದೃಷ್ಟಿಯಿಂದ ಸರ್ಕಾರದ ಅಧಿಸೂಚನೆಗಳು, ಅಧಿಕೃತ ಜ್ಞಾಪನಗಳು, ಶಾಸನಾತ್ಮಕ ಆದೇಶಗಳು, ಸಮಿತಿಗಳ ವರದಿಗಳು, ವಿಚಾರಣಾ ಆಯೋಗದ ವರದಿಗಳು, ವಾರ್ಷಿಕ ವರದಿಗಳು, ವಾರ್ಷಿಕ ಆಡಳಿತ ವರದಿಗಳು, ಸಿಎಜಿ ವರದಿಗಳು, ಪಿಎಸಿ ವರದಿಗಳು, ಸರ್ಕಾರದ ಸುತ್ತೋಲೆಗಳು ಹಾಗೂ ಸಚಿವಾಲಯದ ಇಲಾಖೆಗಳು ಮತ್ತು ಇತರ ಇಲಾಖಾ ಮುಖ್ಯಸ್ಥರು ಕಳುಹಿಸಿಕೊಟ್ಟ ಇತರೆ ವಿಷಯಗಳನ್ನು ಇಂಗ್ಲೀಷ್‌ನಿಂದ ಕನ್ನಡಕ್ಕೆ ಭಾಷಾಂತರಿಸುವುದು ;

4. ಸಚಿವಾಲಯದ ಇಲಾಖೆಗಳು ಮತ್ತು ಇಲಾಖಾ ಮುಖ್ಯಸ್ಥರು ಕಳುಹಿಸಿಕೊಟ್ಟ ಅಲ್ಪಸಂಖ್ಯಾತ ಭಾಷೆಯಲ್ಲಿನ ವಿಷಯಗಳನ್ನು ಕನ್ನಡಕ್ಕೆ ಅಥವಾ ಇಂಗ್ಲೀಷ್‌ಗೆ ಭಾಷಾಂತರಿಸುವುದು ಹಾಗೂ ರಾಜ್ಯದಲ್ಲಿ ಶೇಕಡ 15 ಅಥವಾ ಅದಕ್ಕೂ ಹೆಚ್ಚು ಭಾಷಾ ಅಲ್ಪಸಂಖ್ಯಾತ ಜನಸಂಖ್ಯೆಯನ್ನು ಹೊಂದಿರುವ ಪ್ರದೇಶಗಳಲ್ಲಿ ಪ್ರಕಟಿಸುವ ಸಲುವಾಗಿ ಸರ್ಕಾರದ ಮುಖ್ಯ ಆದೇಶಗಳು, ನಿಯಮಗಳು, ಅಧಿಸೂಚನೆಗಳನ್ನು ಆಯಾ ಪ್ರದೇಶದ ಭಾಷಾ ಅಲ್ಪಸಂಖ್ಯಾತರ ಭಾಷೆಗೆ ಭಾಷಾಂತರಿಸುವುದು;

5. ಸರ್ವೋಚ್ಚ ನ್ಯಾಯಾಲಯದಲ್ಲಿ ದಾಖಲಾಗಿರುವ ವಿಶೇಷ ಅನುಮತಿ ಅರ್ಜಿಗಳಿಗೆ ಸಂಬಂಧಿಸಿದ ಮೊಕದ್ದಮೆಗಳಲ್ಲಿರುವ ಕನ್ನಡದಲ್ಲಿರುವ ವಿಷಯಗಳನ್ನು ಎಂದರೆ ಹೇಳಿಕೆಗಳು, ಸಾಕ್ಷಿಗಳ ಹೇಳಿಕೆ, ಪಾಟೀ ಸವಾಲು ಇತ್ಯಾದಿ ವಿಷಯಗಳನ್ನು ಮತ್ತು ಅಧೀನ ನ್ಯಾಯಾಲಯಗಳ ತೀರ್ಪುಗಳನ್ನು ಹಾಗೂ ಕರ್ನಾಟಕ ಆಡಳಿತ ನ್ಯಾಯ ಮಂಡಳಿಯ ವಿಷಯಗಳನ್ನು ಇಂಗ್ಲೀಷ್‌ಗೆ ಭಾಷಾಂತರಿಸುವುದು.

ಶ್ರೀ ಕೆ.ಆರ್. ಚಾಮಯ್ಯ ಇವರ ಏಕ ಸದಸ್ಯ ಸಮಿತಿ.

1257ಯ(1476) ಶ್ರೀ ಗುರುಸ್ವಾಮಿ ಎ.ಎಸ್. (ಚಾಮುಂಡೇಶ್ವರಿ) : ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

1. 1957ನೇ ಸಾಲಿನ ನಂತರದ ಅಧಿನಿಯಮಗಳನ್ನು ಕ್ರೋಢೀಕರಿಸಲು ಶ್ರೀ ಕೆ.ಆರ್. ಚಾಮಯ್ಯ ಇವರ ಏಕ ಸದಸ್ಯ ಸಮಿತಿಯನ್ನು ರಚಿಸಿರುವ ದಿನಾಂಕ;

2. ಸಮಿತಿಗೆ ಒದಗಿಸಿರುವ ಸವಲತ್ತುಗಳು ;

3. ಈವರೆಗೆ ಸಮಿತಿಯು ಪೂರೈಸಿರುವ ಕೆಲಸಗಳು ;

4. ಸಮಿತಿಯು ಎದುರಿಸುತ್ತಿರುವ ಸಮಸ್ಯೆಗಳು ;

5. ಸಮಿತಿಯ ಕಾರ್ಯವನ್ನು ಯಾವಾಗ ಪೂರ್ಣಗೊಳಿಸಲಾಗುವುದು;

ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು) :

1. ದಿನಾಂಕ 7.8.1996

2.(ಅ) ಕಾರ್ಯದರ್ಶಿ, ಸಹಾಯಕ, ಶೀಘ್ರಲಿಪಿಗಾರ, ಬೆರಳಚ್ಚುಗಾರ, ವಾಹನ ಚಾಲಕ, ದಲಾಯತ್ ಹಾಗೂ ಸ್ವೀಪರ್ ಇವರ ತಲಾ ಒಂದು ಹುದ್ದೆಗಳನ್ನು ಮಂಜೂರು ಮಾಡಲಾಗಿದೆ.

(ಆ) ಒಂದು ಅಂಬಾಸಿಡರ್ ಕಾರನ್ನು ಒದಗಿಸಲಾಗಿದೆ.

(ಇ) ಖಾಸಗಿ ಕಟ್ಟಡದಲ್ಲಿ ಸ್ಥಳಾವಕಾಶವನ್ನು ಒದಗಿಸಲಾಗಿದೆ.

(ಈ) ಒಂದು ಗಣಕೀರಕರಣ ಯಂತ್ರವನ್ನು ಒದಗಿಸಲಾಗಿದೆ.

3.ಅ) ದಿನಾಂಕ 1.11.1956 ರಿಂದ 31.12.1964ರವರೆಗಿನ ಅಧಿನಿಯಮಗಳನ್ನು ಕ್ರೋಢೀಕರಿಸಿ ಪುಸ್ತಕರೂಪದಲ್ಲಿ ಪ್ರಕಟಿಸಲು ಸಿದ್ದಪಡಿಸಲಾಗಿದೆ. 1965ನೇ ಸಾಲಿನಿಂದ 1999ನೇ ಸಾಲಿನವರೆಗಿನ ಅಧಿನಿಯಮಗಳನ್ನು ಕ್ರೋಢೀಕರಿಸಿ ಎರಡನೇ ಪ್ರೂಫನ್ನು ತಿದ್ದಲಾಗಿದೆ. ಮೂರನೇ ಹಾಗೂ ಅಂತಿಮ ಕರಡನ್ನು ತಿದ್ದುವ ಕೆಲಸವು ಪ್ರಗತಿಯಲ್ಲಿದೆ.

(ಆ) ಕರ್ನಾಟಕ ನಿರಸನಗೊಳಿಸುವ ಮತ್ತು ತಿದ್ದುಪಡಿ ವಿಧೇಯಕ,2000ದಲ್ಲಿ 1017 ಅನಗತ್ಯ ಅಧಿನಿಯಮಗಳನ್ನು ನಿರಸನಗೊಳಿಸಲು ಸಿದ್ದಪಡಿಸಿದೆ.

(ಇ) ರಾಜ್ಯ ಸರ್ಕಾರಕ್ಕೆ ಅನ್ವಯಿಸುವ 114 ಕೇಂದ್ರ ಅಧಿನಿಯಮಗಳನ್ನು ಪರಿಶೀಲಿಸಿ ಅನಗತ್ಯ ಅಧಿನಿಯಮಗಳನ್ನು ಗುರುತಿಸಿ ನಿರಸನಗೊಳಿಸಲು ಶಿಫಾರಸ್ಸು ಮಾಡಿದೆ.

(ಈ) ದಿನಾಂಕ 31.12.2000ದವರೆಗಿನ ಎಲ್ಲಾ ತಿದ್ದುಪಡಿಗಳನ್ನು ಅಳವಡಿಸಿ 10 ಸಂಪುಟಗಳಲ್ಲಿ ಮುದ್ರಣಕ್ಕೆ ಸಿದ್ದಪಡಿಸಲಾಗುತ್ತಿದೆ.

4. ಸರ್ಕಾರದ ಕಟ್ಟಡದಲ್ಲಿ ಸ್ಥಳಾವಕಾಶವು ದೊರೆಯದಿದ್ದುದರಿಂದ ಖಾಸಗಿ ಬಾಡಿಗೆ ಕಟ್ಟಡದಲ್ಲಿ ಸಮಿತಿಗೆ ಸ್ಥಳಾವಕಾಶ ಕಲ್ಪಿಸಲಾಗಿದೆ. ಸದರಿ ಬಾಡಿಗೆ ಕಟ್ಟಡವು ಸಚಿವಾಲಯದಿಂದ 7 ಕಿ.ಮೀ ದೂರವಿರುವುದರಿಂದ ಕ್ರೋಢೀಕರಣಕ್ಕೆ ಸಂಬಂಧಿಸಿದ ಮಾಹಿತಿಗಳನ್ನು ಆಗಿಂದಾಗ್ಗೆ ಸಚಿವಾಲಯಕ್ಕೆ ಬಂದು ಪಡೆದುಕೊಳ್ಳಬೇಕಾಗಿದೆ.

5. ದಿನಾಂಕ 31.12.2001ರೊಳಗೆ ಪೂರ್ಣಗೊಳಿಸಲಾಗುವುದು.